# ರಾಖಿ- ಇಲೇಶ್ ಜಟಾಪಟಿ



ಊರೆಲ್ಲಾ ಡಂಗುರ ಸಾರಿ, ಮದುವೆಯಾಗುವ ಹುಡುಗನನ್ನು ಟಿ.ವಿ ಪರದೆಯ ಮೇಲೆ ನಾಟಕೀಯವಾಗಿ ಹುಡುಕಿಕೊಂಡ ರಾಖಿ ಸಾವಂತಳ ಸ್ವಯಂವರ ಇದೀಗ ನಗೆಪಾಟಲಿಗೆ ಈಡಾಗಿದೆ. ಟಿ.ವಿ ಕ್ಯಾಮೆರಾ ಮುಂದೆ ಪಡಬಾರದ ಕಷ್ಟ ಪಟ್ಟು, ರಾಖಿಯನ್ನು ನಿಶ್ಚಿತಾರ್ಥ ಮಾಡಿಕೊಂಡ ಕೆನಡಾದ ಅನಿವಾಸಿ ಭಾರತೀಯ ಇಲೇಶ್ ಪರುಜನ್‌ವಾಲಾ ಈಗ ರಾಖಿಯ ಮೇಲೆ ಕೆಂಡ ಕಾರುತ್ತಿದ್ದಾನೆ. ಕಾರಣ– ರಾಖಿಯ ಹರಕು ಬಾಯಿ!

'ಇಲೇಶ್‌ನ ಆರ್ಥಿಕ ಪರಿಸ್ಥಿತಿ ಅಷ್ಟೇನೂ ಚೆನ್ನಾಗಿಲ್ಲ. ಮದುವೆಯಾದ ಬಳಿಕ ನಾನು ಕೆನಡಾದಲ್ಲಿ ನೆಲೆಸಲು ಸಾಧ್ಯವಿಲ್ಲ' ಎಂದು ರಾಖಿ ಟಿ.ವಿ ಮತ್ತು ಪತ್ರಿಕೆಗಳಲ್ಲಿ ಟಾಂ ಟಾಂ ಮಾಡಿದ್ದೇ ಇಲೇಶ್ ಸಿಟ್ಟಿಗೆ ಕಾರಣ. ಈಗ ಆತನೂ ಮಾಧ್ಯಮದ ಮೊರೆ ಹೋಗಿದ್ದಾನೆ.

'ಆಕೆಯನ್ನು ಮೆಚ್ಚಿಸಲು ಎಷ್ಟೋ ಪ್ರಯತ್ನ ನಡೆಸಿದೆ. ಆಕೆಯನ್ನು ಅರ್ಥ ಮಾಡಿಕೊಳ್ಳಲೂ ಸಾಕಷ್ಟು ಶ್ರಮ ಪಟ್ಟೆ. ಆದರೆ ಅವಳಿಗೆ ನನ್ನ ಬಗ್ಗೆ ಅಪಪ್ರಚಾರ ನಡೆಸುವುದೇ ಚಾಳಿ ಆದಂತಿದೆ. ಬದುಕೋದಕ್ಕೆ ನನ್ನ ಹೆತ್ತವರ ಕೈಯಿಂದ ದುಡ್ಡು ಪಡೆಯೋದಿಲ್ಲ ಎಂದು ನಾನು ಹೇಳಿದ್ದೇ ತಪ್ಪೆ? ಮದುವೆಯಾದ ಮೇಲೆ ಮಗು ಹೆರಲು ಕೆನಡಾ ಸೂಕ್ತ; ಅಲ್ಲಿ ನನ್ನ ಹೆತ್ತವರು ಇರೋದರಿಂದ ಎಲ್ಲ ಸುಲಭವಾಗುತ್ತದೆ ಎಂದು ಹೇಳಿದ್ದು ತಪ್ಪೆ? ಈ ಬಾಲಿವುಡ್ ಹುಡುಗೀರ ಹಣೇಬರಹವೇ ಇಷ್ಟು. ನಾಟಕ ಮಾಡೋದರಲ್ಲಿ ಎತ್ತಿದ ಕೈ. ಬರೀ ಪ್ರಚಾರಕ್ಕಾಗಿ ಎಲ್ಲ ನಡೆಸಿದ್ದಾರೆ...' ಎಂದೆಲ್ಲ ಇಲೇಶ್ ಮೊದಲ ಬಾರಿಗೆ ಘಟ್ಟಿಸಿ ಮಾತನಾಡಿದ್ದಾನೆ. ರಾಖಿಯ ಹೆಸರಲ್ಲೇ 'ಸಾವಂತ' ಎಂದಿದೆ. ಅಂದರೆ ಮದುವೆಯಾದಾತ 'ಸಾವಂತ'ನಂತೆ ಕಪ್ಪ ಕಾಣಿಕೆ ಕೊಟ್ಟು, ತಗ್ಗಿ ಬಗ್ಗಿ ನಡೆಯಬೇಕು ಎಂದಿರಬಹುದು. ಅದನ್ನು ತಿಳಿದುಕೊಳ್ಳದ ಇಲೇಶ್ ಈಗ ಪ್ರಲಾಪ ಮಾಡುವುದರಲ್ಲಿ ಅರ್ಥವಿಲ್ಲ ಎಂದು ಬಾಲಿವುಡ್ ಪಂಡಿತರು ಕುಹಕ ಆಡುತ್ತಿದ್ದಾರೆ!

# ಹೃತಿಕ್ ಕಿಸ್ಸಾಯಣ

ಸಂಜಯ್ ಲೀಲಾ ಬನ್ಸಾಲಿಯ ಹೊಸ ಚಿತ್ರ ಗುಜಾರಿಶ್ ನಲ್ಲಿ ಹೀರೋಯಿನ್ ಐಶ್ವರ್ಯ ಮತ್ತು ಹೀರೊ ಹೃತಿಕ್ ರೋಶನ್ ಮಧ್ಯೆ ಸುದೀರ್ಘ ಚುಂಬನದ ಒಂದು ದೃಶ್ಯ ಇತ್ತಂತೆ. ಆದರೆ ಅದರ ಚಿತ್ರೀಕರಣ ಇನ್ನೂ ಆಗಿಲ್ಲ. ಇದೀಗ ಬಂದಿರುವ ಸುದ್ದಿಯೆಂದರೆ, 'ನಿರ್ದೇಶಕರು ಮನಸ್ಸು ಬದಲಾಯಿಸಿದ್ದಾರೆ. ಸುದೀರ್ಘ ಚುಂಬನದ ದೃಶ್ಯವನ್ನು ಹೃತಿಕ್ ಜತೆ ಸೆಕೆಂಡ್ ಹೀರೋಯಿನ್ ಮೋನಿಕಂಗನಾ ಮಾಡುತ್ತಾಳಂತೆ!'

ಈ ಮೋನಿಕಂಗನಾ ಈಗಾಗಲೆ ಮಾಡೆಲಿಂಗ್‌ನಲ್ಲಿ ಸೂಪರ್ ತಾರೆ. ಕಿಂಗ್‌ಫಿಶರ್ ಕ್ಯಾಲೆಂಡರ್‌ನಲ್ಲಿ ಈಕೆಯ 'ಓಪನ್ ಸೆಶನ್' ನೋಡಿ ಬಾಲಿವುಡ್‌ನ ಹಲವು ನಿರ್ದೇಶಕರು ಬೆಚ್ಚಿ ಬಿದ್ದಿದ್ದಾರೆ. ಆದರೆ ಆಕೆಗೂ ಕಿಸ್ಸಿಂಗ್ ದೃಶ್ಯದಲ್ಲಿ ಭಾಗವಹಿಸಲು ಭಯವಂತೆ! ಮೊನ್ನೆ ಹೃತಿಕ್ ಪತ್ನಿಯೇ ಮೋನಿಯನ್ನು ಭೇಟಿಯಾಗಿ ಕಿಸ್ ದೃಶ್ಯಕ್ಕೆ ಧೈರ್ಯ ತುಂಬಿದ್ದಾಳಂತೆ!

–ಬಿಂದು





# ಕರೀನಾ ರೆಡಿ!

ಶಾಹಿದ್ ಕಪೂರನ ಗೆಳೆತನ ಬಿಟ್ಟು ದೂರವಾಗಿದ್ದ ಕರೀನಾ ಕಪೂರ್ ಇದೀಗ ಮೊದಲ ಬಾರಿಗೆ ಶಾಹಿದ್ ಜತೆ ಮತ್ತೆ ನಟಿಸಲು ಹೂಂ ಎಂದಿದ್ದಾಳಂತೆ. 'ಜಬ್ ವಿ ಮೆಟ್' ಚಿತ್ರದ ಬಳಿಕ ಈ ಜೋಡಿ ಈವರೆಗೆ ಪರಸ್ಪರ ಭೇಟಿಯಾಗಿಲ್ಲ! ಆಗಲೇ ಪಂಕಜ್ ಕಪೂರ್ ನಿರ್ದೇಶನದ 'ಮೌಸಮ್' ಚಿತ್ರದಲ್ಲಿ ಇವರಿಬ್ಬರೂ ನಟಿಸಬೇಕಿತ್ತು. ಆದರೆ ಜಗಳವಾಗಿ ಕರೀನಾ ಊರು ಬಿಟ್ಟು ಸೈಫ್ ಖಾನ್‌ನ ಜತೆ ಬದುಕಲು ನಿರ್ಧರಿಸಿದಳು. ಮೊನ್ನೆ ಪತ್ರಕರ್ತರು ಈ ಬಗ್ಗೆ ಪ್ರಶ್ನಿಸಿದರೆ, 'ಒಳ್ಳೇ ಕಥೆ ಇದ್ದರೆ, ಸೂಕ್ತ ಪಾತ್ರ ಇದ್ದರೆ ಶಾಹಿದ್ ಜತೆ ನಟಿಸೋದಕ್ಕೆ ಏನಡ್ಡಿ?' ಎಂದಿದ್ದಾಳೆ ಕಿಲಾಡಿ ಕರೀನಾ! ಅಂದರೆ, ಸೈಫ್‌ಗೆ ಇದು ಎಚ್ಚರಿಕೆ ಗಂಟೆ ಇರಬಹುದೆ?



